ಕಾಲೇಜಿನಿಂದ ಬಿ.ಎ. ಪದವಿ ಪಡೆದರು (1917). ಬಿಜಾಪುರದ ಪಿಡಿಜೆ (ಶ್ರೀಕೃಷ್ಣ ಪಾಠಶಾಲೆ) ಹೈಸ್ಕೂಲಿನಲ್ಲಿ ಶಿಕ್ಷಕರಾದರು. ಗಾಂಧೀಜಿ ಬ್ರಿಟಿಷ್ ಸರ್ಕಾರದ ವಿರುದ್ಧ ಅಸಹಕಾರದ ಆಂದೋಲನ ಕೈಗೊಳ್ಳಲು ಕರೆ ಕೊಟ್ಟಾಗ (1920) ಶಿಕ್ಷಕ ಹುದ್ದೆಗೆ ರಾಜೀನಾಮೆ ಕೊಟ್ಟು, ರಾಷ್ಟ್ರೀಯ ಶಾಲೆಯಲ್ಲಿ ಶಿಕ್ಷಕರಾಗಿ ಧಾರವಾಡಕ್ಕೆ ಬಂದರು. ಮುಂದೆ ಆ ಶಾಲೆಯೂ ನಿಂತು ಹೋಯಿತು. ಬೆಳಗಾವಿಯಲ್ಲಿ ನಡೆದ 43ನೆಯ ಕಾಂಗ್ರೆಸ್ ಅಧಿವೇಶನದಲ್ಲಿ ಗಾಂಧೀಜಿಯ ಹಿಂದು ಭಾಷಣವನ್ನು ಕನ್ನಡಕ್ಕೆ (1924) ಭಾಷಾಂತರಿಸಿದ್ದರು. ಅದೇ ವರ್ಷ ಪತ್ನಿ ತೀರಿಕೊಂಡರು. ದೇಶಭಕ್ತರಾಗಿದ್ದ ಹೊಸಮನಿ ಪರಮಣ್ಣನವರ ಸಹಾಯದಿಂದ, ಮೂವರು ಚಿಕ್ಕಮಕ್ಕಳನ್ನು ಕರೆದುಕೊಂಡು ಕರ್ಜಗಿಗೆ ಹೋಗಿ, ಒಂದು ಪ್ರಾಯೋಗಿಕ ಶಾಲೆ ನಡೆಸಿದ್ದರು.

ಗಾಂಧೀಜಿ ಆರಂಭಿಸಿದ ದಂಡೀ ಯಾತ್ರೆಗೆ (1931) ಕರ್ನಾಟಕದಿಂದ ಸ್ವಯಂಸೇವಕರನ್ನು ಕಳಿಸಬೇಕಾಗಿತ್ತು. ಡಾ. ಕಬ್ಬೂರರ ಕೋರಿಕೆಯ ಮೇರೆಗೆ, ಸಾಲಿಯವರು ಮಗ ಶ್ರೀಕೃಷ್ಣನನ್ನು ಕಳಿಸಿದರು. ಕರ್ನಾಟಕ ಕಾಲೇಜಿನಲ್ಲಿ ಮೊದಲ ವರ್ಷದಲ್ಲಿ ಓದುತ್ತಿದ್ದ, 16ರ ವಯಸ್ಸಿನ ಶ್ರೀಕೃಷ್ಣನು ಸ್ವಸಂತೋಷದಿಂದ ಹೋದ. ಅವನೂ ತಂದೆಯ ಹಾಗೆ ದೇಶದ ಬಗ್ಗೆ ಉತ್ಕಟ ಅಭಿಮಾನ, ಪ್ರೇಮ ತುಂಬಿಕೊಂಡಿದ್ದವನು. ದಾಂಡಿಯಿಂದ ಬಂದ ಶ್ರೀಕೃಷ್ಣ ಕಾಲೇಜಿನಲ್ಲಿ ಯೂಟಿಸಿ ಪರೇಡ್ ಮುಗಿಸಿ ಬಂದವನೇ ಜ್ವರಪೀಡಿತನಾಗಿ ಮಲಗಿದವನು ಮೇಲೇಳಲಿಲ್ಲ. ದಂಡೀಯಾತ್ರೆಯಲ್ಲಿಯೂ ಬ್ರಿಟೀಷರ ಹೊಡೆತಗಳಿಂದ ನುಗ್ಗಾಗಿದ್ದ. ಸಾಲಿಯವರು ಏಕಮಾತ್ರ ಪುತ್ರನನ್ನು ಕಳೆದುಕೊಂಡರು. ಆಗ ಅವರು ರಚಿಸಿದ 'ತಿಲಾಂಜಲಿ' ಕನ್ನಡದ ಪ್ರಪ್ರಥಮ ಶೋಕಗೀತ. ಆನಂತರ ಸಾಲಿಯವರು ಪ್ರತಿಯೊಬ್ಬ ಯುವಕನಲ್ಲಿಯೂ ತಮ್ಮ ಶ್ರೀಕೃಷ್ಣನನ್ನೇ ಕಾಣತೊಡಗಿದ್ದರು. ಅವರ 'ರಾಮಚರಿತವು' ಹೊಸಗನ್ನಡದಲ್ಲಿ ಬಂದ ಮೊಟ್ಟಮೊದಲ ಮಹಾಕಾವ್ಯ. ಆಲೂರರ 'ಜಯಕರ್ನಾಟಕ'ದಲ್ಲಿ ಸಹಸಂಪಾದಕರಾಗಿ (1926-27), ನಂತರ ಕರ್ನಾಟಕ ಹೈಸ್ಕೂಲಿನಲ್ಲಿ (1928-46) ಸೇವೆ ಸಲ್ಲಿಸಿ ನಿವೃತ್ತರಾದರು. 1953ರಲ್ಲಿ ಭಾರತ ಸರಕಾರ ಮತ್ತು 1955ರಲ್ಲಿ ಮುಂಬಯಿ ಸರ್ಕಾರದಿಂದ ಅಲ್ಪಪ್ರಮಾಣದ ವಾರ್ಷಿಕ ಆರ್ಥಿಕ ನೆರವು ಲಭಿಸಿತ್ತು, ಅಷ್ಟೆ. ಇತರ ಯಾವ ಆರ್ಥಿಕ ನೆರವೂ ಇರದೇ, ಕೊನೆಯವರೆಗೂ ಭಾರತದ 'ಹಂಬಲದ' ಬಡತನವನ್ನೇ, ಹೊದ್ದು ಬದುಕಿದ್ದರು. ಅವರು ಕಂಡ ಎರಡು ಸಂತಸದ ಕ್ಷಣಗಳೆಂದರೆ, 1941ರಲ್ಲಿ ಎ.ಆರ್. ಕೃಷ್ಣಶಾಸ್ತ್ರಿಯವರ ಅಧ್ಯಕ್ಷತೆಯಲ್ಲಿ ಹೈದರಾಬಾದ್‌ದಲ್ಲಿ ನಡೆದ 26ನೆಯ ಸಾಹಿತ್ಯ ಸಮ್ಮೇಳನದಲ್ಲಿ ಕವಿಗೋಷ್ಠಿಯ ಅಧ್ಯಕ್ಷರಾಗಿದ್ದು, ಮತ್ತು ತಮ್ಮ 81ನೆಯ ವಯಸ್ಸಿನಲ್ಲಿ 1969ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯವರು, ಬೆಂಗಳೂರಿನಲ್ಲಿ (1968ರ ಪ್ರಶಸ್ತಿ ನೀಡಿ) ಗೌರವಿಸಿದ್ದು.

ಬದುಕು ಸಾಲಿಯವರನ್ನು ವಿಧವಿಧವಾಗಿ ಕಾಡಿದ್ದುದನ್ನು ನಾನು ಸ್ವತಃ ಕಂಡಿದ್ದೇನೆ. ಅವರು ಸ್ಥಿತಪ್ರಜ್ಞರಾಗಿ ಕಾಲ ಕಳೆದಿದ್ದಾರೆ. ಇಪ್ಪತ್ತು ವರ್ಷ (1958– 1978) ಅವರ ಸೇವೆ ಮಾಡಿದ ನನಗೆ ಸಹ ಅನೇಕ ಹಂಬಲು, ಆದರ್ಶಗಳನ್ನು ಕರುಣಿಸಿದ್ದಾರೆ. ಪ್ರತಿದಿನ ನನ್ನ ಕಾಲೇಜು ಕೆಲಸ ಮುಗಿಸಿ, ಸಂಜೆತನಕ ಅವರಲ್ಲಿ ಹೋಗುತ್ತಿದ್ದೆ. ಅವರ ಲೇಖನಗಳನ್ನು ಪ್ರತಿ ಮಾಡುವುದು, ಪತ್ರಗಳಿಗೆ ಉತ್ತರ ಬರೆಯುವುದು, ಅವರ ಸಹಿ ಪಡೆದು, ಅಂಚೆಗೆ ಕಳಿಸುವುದು, ಪೇಟೆಗೆ ಕರೆದುಕೊಂಡು ಹೋಗುವುದು ಮುಂತಾದ ಕೆಲಸ ಮಾಡುತ್ತಿದ್ದೆ. ಅವರ ನಿಧನಾನಂತರ 1980ರಲ್ಲಿ ಒಂದು ಸಂಸ್ಮರಣ ಗ್ರಂಥ ಪ್ರಕಟಿಸಿದ್ದೆ. 1996ರಲ್ಲಿ ಅವರ 'ಸಮಗ್ರ ಕಾವ್ಯ', 2013ರಲ್ಲಿ 'ಕನ್ನಡ ಮೇಘದೂತ'ವನ್ನು ಪ್ರಕಟಿಸಿದ್ದೆ. ಗಾಂಧೀಜಿಯ ಆತ್ಮಕಥೆಯನ್ನು (1925) ಅದು ಪ್ರಕಟವಾದ ಎರಡೇ ವರ್ಷಗಳಲ್ಲಿ ನೇರವಾಗಿ ಗುಜರಾತಿಯಿಂದ ಕನ್ನಡಕ್ಕೆ ಅನುವಾದಿಸಿದ ಅಪರೂಪದ ಹಸ್ತಪ್ರತಿ ನನ್ನಲ್ಲಿದೆ. ಅದರ ಕೆಲವು ಪುಟಗಳು ಅವರ ಮನೆ ಶ್ರೀನಿಕೇತನದಲ್ಲಿ ಎಲ್ಲೋ ಕಳೆದುಹೋಗಿವೆ. ಕನ್ನಡ ಮತ್ತು ಸಂಸ್ಕೃತದಲ್ಲಿ, ಸುಂದರ ಅಕ್ಷರಗಳಲ್ಲಿ ಬರೆದಿರುವ ಸಾಲಿ ರಾಮಚಂದ್ರ ರಾಯರ ಕೆಲವು ಅಪ್ರಕಟಿತ ಹಸ್ತಪ್ರತಿ, ಡೈರಿ, ಚೋಪಡಿಗಳನ್ನು ಜೋಪಾನದಿಂದ ಕಾಯ್ದುಕೊಂಡಿದ್ದೇನೆ. ●